ಬೆಳಕಿನ ದೊಂದಿ ಆರಿಹೋಗಿದೆ.
ಆಗಸದಲ್ಲೊಂದು ಹೊಸ ತಾರೆ
ನಮ್ಮ ದುಃಖವೆಲ್ಲ ಕಣ್ಣೀರು.

ಆ ಬೆಳಕು ಅಸಲಿಯಾಗಿತ್ತು
ನಿರ್ಭಯವಾಗಿತ್ತು
ಬಲು ಬೇಗ ಮಾಯವಾಯಿತು;
ಸುತ್ತ ಸುಡುವ ಬೂದಿಯ ರಾಶಿ.

ದೇವನೊಬ್ಬನಿದ್ದರೆ
ಅವನನ್ನು ಕೇಳುವೆನು:
ದೊಂದಿಗಳು ಉರಿದು
ಹೋಗುತ್ತವೆ.
ಆದರೆ ಯಾಕಿಷ್ಟು ಬೇಗ–
ಇನ್ನೂ ಉರಿವ ತ್ರಾಣವಿರುವಾಗ?

ಲೋಹಿಯಾ ತೀರಿಕೊಂಡಾಗ ಎಚ್.ಎಂ. ಚೆನ್ನಯ್ಯ ಬರೆದ 'ಲೋಹಿಯಾ' ಪದ್ಯದ ಪ್ರತಿಮೆಗಳು:

ಅಯ್ಯಾ
ನೀನಿಲ್ಲದಾಗ, ಈ ಅಡವಿಯಲ್ಲಿ
ಮತ್ತೆ ಆನೆ ಬೆಕ್ಕು ಇಲಿ ಓಡಾಟ ನಿರಾಕುಳ.
ನಿನ್ನಂಥ ಜಾಡಮಾಲಿ ಮತ್ತೊಬ್ಬನಿಲ್ಲೆನಿಸಿ
ನೀನು ಪಂಚತ್ವವನು ಪಡೆದೀ ಸಂದರ್ಭದಲ್ಲಿ
ಎರಡು ಹನಿ ಕಣ್ಣೀರಿಟ್ಟು
ಕೋಣೆಯ ಕಸ ಗುಡಿಸಲು ಕೈಗೆ
ಕಸಬರಿಕೆ ತೆಗೆದುಕೊಳ್ಳುತ್ತೇನೆ ನಾನು.

ಹೀಗೆ ಲೋಹಿಯಾ ಅರ್ಧದಲ್ಲೇ ಬಿಟ್ಟುಹೋದ ಕೆಲಸವನ್ನು ಮುಂದುವರಿಸಬೇಕೆಂಬ ಕಾತರ, ಕಾಳಜಿ, ತಹತಹ ಭಾರತದ ರಾಜಕಾರಣ, ಸಂಸ್ಕೃತಿ, ಸಾಹಿತ್ಯಗಳ ವಲಯಗಳಲ್ಲಿ ಹಬ್ಬಿತು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಗಾಂಧೀಜಿ, ಅಂಬೇಡ್ಕರ್ ನಿರ್ಗಮನದ ನಂತರ ಇಂಥ ಕಾತರ ಹಲವು ವಲಯಗಳಲ್ಲಿ ಹುಟ್ಟಿತ್ತು. ಈ ಕಾತರ ಮತ್ತೆ ಹುಟ್ಟಿದ್ದು ಲೋಹಿಯಾ ನಿರ್ಗಮನದ ನಂತರವೇ ಇರಬೇಕು. ಆಧುನಿಕ ಭಾರತದ ರಾಜಕೀಯ ಚರಿತ್ರೆಯಲ್ಲಿ ದೇಶದುದ್ದಕ್ಕೂ ಇಂಥ ನಿಸ್ವಾರ್ಥ ಹಂಬಲ ಹಬ್ಬಿದ್ದು ಇದೇ ಕಡೆಯ ಸಲವಿರಬೇಕು...

ಲೋಹಿಯಾರ ಶಸ್ತ್ರಚಿಕಿತ್ಸೆಯ ಲೋಪಗಳು ಹಾಗೂ ಅಕಾಲಿಕ ಮರಣದ ಬಗ್ಗೆ ತನಿಖೆ ನಡೆಯಬೇಕೆಂದು ಮಧು ಲಿಮಯೆ ಲೋಕಸಭೆಯಲ್ಲೂ, ಕಾಂಗ್ರೆಸ್ ನಾಯಕ ಚಂದ್ರಶೇಖರ್ ರಾಜ್ಯಸಭೆಯಲ್ಲೂ ಒತ್ತಾಯಿಸಿದರು. ಒಟ್ಟಾರೆಯಾಗಿ ಸರ್ಕಾರಿ ಆಸ್ಪತ್ರೆಗಳು ಕೆಲಸ ಮಾಡುತ್ತಿರುವ ರೀತಿ ಕುರಿತು ವಿಚಾರಣೆ ಮಾಡಲು ಸರ್ಕಾರ ಸಮಿತಿಯೊಂದನ್ನು ನೇಮಿಸಿತು.

ಭಾರತದ ಶ್ರೇಷ್ಠ ಕಲಾವಿದರಲ್ಲೊಬ್ಬರಾದ ಎಂ.ಎಫ್. ಹುಸೇನ್‌ಗೆ 'ನಿನ್ನ ಕಲೆ ಯಾಕೆ ನಾಲ್ಕು ಗೋಡೆಗಳನ್ನು ಬಿಟ್ಟು ಬರಬಾರದು?' ಎಂದು ಲೋಹಿಯಾ ಒಮ್ಮೆ ಕೇಳಿದ್ದು ನೆನಪಾಯಿತು:

'ಅವತ್ತು ಲೋಹಿಯಾರ ಮಾತುಗಳು ಬಾಣದಂತೆ ನನ್ನ ಹೃದಯ ಹೊಕ್ಕವು; ಎಷ್ಟೋ ವರ್ಷ ನನ್ನನ್ನು ಕೆಣಕುತ್ತಲೇ ಇದ್ದವು. ಲೋಹಿಯಾ ತೀರಿಕೊಂಡ ನಂತರ ಅವರ ನೆನಪಿನಲ್ಲಿ ಪೆನ್ನು, ಬ್ರಶ್ ಹಿಡಿದುಕೊಂಡು ದಿಲ್ಲಿಯ ಮೋತಿಭವನದ ಬಳಿ ಹೋದೆ. ಮೋತಿಭವನದ ಗೋಡೆಗಳ ಮೇಲೆ ನೂರೈವತ್ತು ರಾಮಾಯಣದ ದೃಶ್ಯಗಳನ್ನು ಬಿಡಿಸಿದೆ. ಈ ಕೆಲಸ ಹತ್ತು ವರ್ಷ ಹಿಡಿಯಿತು. ಯಾರಿಂದಲೂ ನಯಾ ಪೈಸೆ ಕೇಳಲಿಲ್ಲ. ಇದು ಲೋಹಿಯಾ ಮಾತಿಗೆ ಗೌರವ ಸಲ್ಲಿಸಲು ನಾನು ಮಾಡಿದ ಕೆಲಸ.'

ಹುಸೇನ್ ಲೋಹಿಯಾ ಪುಸ್ತಕಗಳ ವಸ್ತುಗಳನ್ನು ಬಿಂಬಿಸುವ ಅರ್ಥಪೂರ್ಣ ಮುಖಪುಟಗಳನ್ನೂ ರೂಪಿಸಿದರು.

ಯಾವ ರಾಜಕೀಯಾಧಿಕಾರವನ್ನೂ ಪಡೆಯದ ಜನನಾಯಕನೊಬ್ಬ ಕಲಾವಿದರು, ಕಾರ್ಮಿಕರು, ರೈತರು, ಲೇಖಕ, ಲೇಖಕಿಯರು, ಜನಸಾಮಾನ್ಯರು, ರಾಜಕಾರಣಿಗಳ ವಲಯಗಳಲ್ಲಿ ಪ್ರೀತಿ, ಕೃತಜ್ಞತೆ, ಪ್ರೇರಣೆಗಳನ್ನು ಉಳಿಸಿಹೋಗಿದ್ದ. ಕಾಂಗ್ರೆಸ್‌ನಲ್ಲಿದ್ದ ತಾರಕೇಶ್ವರಿ ಸಿನ್ಹಾಗೆ ಲೋಹಿಯಾ 'ದೇಹವಿಲ್ಲದ ಶುದ್ಧ ಆತ್ಮದಂತೆ' ಕಂಡಿದ್ದರು; ಲೋಹಿಯಾ ತೀರಿಕೊಂಡ ನಂತರ ಅವರನ್ನು 'ಗುಡಿಸಿಲಿಲ್ಲದ ಜೋಗಿ' ಎಂದು ತಾರಕೇಶ್ವರಿ ಬಣ್ಣಿಸಿದರು.

ಲೋಹಿಯಾ ಜೊತೆಯಲ್ಲಿದ್ದವರಿಗೆ ಲೋಹಿಯಾ ವ್ಯಕ್ತಿತ್ವ, ಲೋಹಿಯಾ ಮಾರ್ಗ, ಲೋಹಿಯಾ ಚಿಂತನೆಗಳನ್ನು ಮುಂದೊಯ್ಯುವ ಕನಸು, ಗುರಿಗಳಿದ್ದವು. ಸಮಾಜವಾದಿ ಪಕ್ಷ ಕೂಡುತ್ತಾ, ಒಡೆಯುತ್ತಾ ನಡೆಯಿತು. ಬದರಿ ವಿಶಾಲ ಪಿಟ್ಟಿ, ಕೇಶವರಾವ್ ಜಾಧವ್ ಇನ್ನಿತರರು ಹೈದರಾಬಾದ್‌ನಲ್ಲಿ 'ರಾಮಮನೋಹರ ಲೋಹಿಯಾ ಸಮತಾ ವಿದ್ಯಾಲಯ ಟ್ರಸ್ಟ್' ರೂಪಿಸಿದರು. ಲೋಹಿಯಾ ಬರಹಗಳನ್ನು ಸಂಗ್ರಹಿಸಿದರು; ಲೋಹಿಯಾ ಪುಸ್ತಕಗಳನ್ನು ಪ್ರಕಟಿಸತೊಡಗಿದರು.

'ಮ್ಯಾನ್‌ಕೈಂಡ್' ಸಂಪಾದಕತ್ವ ರಮಾಮಿತ್ರರ ಹೆಗಲಿಗೆ ಬಿತ್ತು. ಕಿಶನ್ ಪಟ್ನಾಯಕ್, ಸ್ನೇಹಲತಾ ರೆಡ್ಡಿ ಮೊದಲಾದವರ ಜೊತೆಗೆ ಗೋಪಾಲಗೌಡ, ಪೂರ್ಣಚಂದ್ರ ತೇಜಸ್ವಿ ಸಂಪಾದಕೀಯ ಬಳಗದಲ್ಲಿದ್ದರು. ಸಮಾಜವಾದಿ ರಾಜಕೀಯ ವಿಶ್ಲೇಷಣೆಗಳು, ಲೋಹಿಯಾರ ಅಪ್ರಕಟಿತ ಬರಹಗಳು 'ಮ್ಯಾನ್‌ಕೈಂಡ್'ನಲ್ಲಿ ಪ್ರಕಟವಾಗತೊಡಗಿದವು.

ಲೋಹಿಯಾರ ಶಸ್ತ್ರಚಿಕಿತ್ಸೆ ಕುರಿತ ವರದಿಯ ಸಾರ 26 ಜನವರಿ 1968ರ 'ಟೈಮ್ಸ್ ಆಫ್ ಇಂಡಿಯಾ'ದಲ್ಲಿ ಪ್ರಕಟವಾಯಿತು:

'ಲೋಹಿಯಾರ ಆಪರೇಷನ್‌ಗೆ ಮುನ್ನ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಗಳನ್ನು ನಿರ್ಲಕ್ಷಿಸಲಾಗಿತ್ತು. ಸರಿಯಾದ ಜೀವನಾಶಕಗಳನ್ನು ಬಳಸಿದ್ದರೆ ಗಾಯ ಕೊಳೆಯುತ್ತಿರಲಿಲ್ಲ. ಲ್ಯಾಬೊರೇಟರಿ ವ್ಯವಸ್ಥೆಯಲ್ಲೂ ದೋಷಗಳಿದ್ದವು. ಲೋಹಿಯಾ ಮರಣದ ವಿಚಾರಣೆ ನಮ್ಮ ವ್ಯಾಪ್ತಿಗೆ ಬರುವುದಿಲ್ಲ. ಆದರೂ, ಆಸ್ಪತ್ರೆಯ ವೈದ್ಯರುಗಳು ಮುನ್ನೆಚ್ಚರಿಕೆ, ಕಾಳಜಿ ವಹಿಸಿದ್ದರೆ ಲೋಹಿಯಾರ ಮರಣವನ್ನು ತಪ್ಪಿಸಬಹುದಾಗಿತ್ತು ಎಂದು ಹೇಳಬಹುದು.

'ಲೋಹಿಯಾರ ಶಸ್ತ್ರಚಿಕಿತ್ಸೆಯನ್ನು ಮಾಡಿದ್ದಾರೆಂದು ಹೆಸರಿಸಲಾಗಿರುವ ವೈದ್ಯರು ಶಸ್ತ್ರಚಿಕಿತ್ಸೆ ಮಾಡಿರಲಿಲ್ಲ; ಅದೇ ಆಗ ವೃತ್ತಿಗೆ ಸೇರಿದ್ದ ಜೂನಿಯರ್ ಡಾಕ್ಟರೊಬ್ಬರು ಶಸ್ತ್ರಚಿಕಿತ್ಸೆ ಮಾಡಿದ್ದಾರೆ. ಪ್ರಾಸ್ಟೇಟ್ ಶಸ್ತ್ರಚಿಕಿತ್ಸೆಯನ್ನು ಸಾಮಾನ್ಯವಾಗಿ ಕಿಬ್ಬೊಟ್ಟೆಯಲ್ಲಿ ಮಾಡಲಾಗುತ್ತದೆ. ಆದರೆ ಇಲ್ಲಿ ಬೇರೊಂದು ಕ್ರಮವನ್ನು ಅನುಸರಿಸಲಾಗಿದೆ. ಲೋಹಿಯಾರ ಸ್ಥಿತಿ ಬಿಗಡಾಯಿಸಿದಾಗ ಬೇರೆಡೆಯಿಂದ ಹಿರಿಯ ತಜ್ಞರನ್ನು ಕರೆಸಲಾಯಿತು. ಅಷ್ಟೊತ್ತಿಗೆ ಕಾಲ ಮಿಂಚಿತ್ತು.'

ಲೋಹಿಯಾ ತೀರಿಕೊಂಡ 'ವಿಲ್ಲಿಂಗ್‌ಡನ್ ಆಸ್ಪತ್ರೆ' ಮುಂದೆ 'ರಾಮಮನೋಹರ ಲೋಹಿಯಾ ಆಸ್ಪತ್ರೆ'ಯಾಯಿತು.

* * *

ಇತ್ತ ಕರ್ನಾಟಕ ಲೋಹಿಯಾ ನಿರ್ಗಮನಕ್ಕೆ ಹಲ ಬಗೆಯಲ್ಲಿ ಸ್ಪಂದಿಸಿತು. ಲೋಹಿಯಾ ನಂತರ ಲೋಹಿಯಾ ಚಿಂತನೆ ವಿಸ್ತೃತವಾಗಿ ಬೆಳೆದ ಆಂಧ್ರ, ಕೇರಳ, ತಮಿಳುನಾಡು, ಮಹಾರಾಷ್ಟ್ರ, ಬಿಹಾರ, ಉತ್ತರ ಪ್ರದೇಶಗಳಿಗಿಂತ ಕರ್ನಾಟಕದ ಲೋಹಿಯಾ ವಾತಾವರಣ ಭಿನ್ನವಾಗಿತ್ತು.

ಲೋಹಿಯಾ ಚಿಂತನೆಗಳ ಸ್ಪರ್ಶದಿಂದ ಉತ್ತರ ಕನ್ನಡದ ಕವಿ ವಿಷ್ಣುನಾಯ್ಕರು ಸಮಾಜವಾದಿ ಪಕ್ಷದ ಆಲದಮರ ಚಿಹ್ನೆಯನ್ನೇ ಲೋಹಿಯಾ ವ್ಯಕ್ತಿತ್ವದ ರೂಪಕವಾಗಿಸಿದ 'ಆಲ' ಕವಿತೆಯಲ್ಲಿ ಲೋಹಿಯಾ ಚಿತ್ರಗಳು:

ಕತ್ತೆ ಎಂದನಿವನು ವರ್ಗವ್ಯತ್ಯಾಸವನು
ನೇಗಿಲನು ಹಿಡಿದವನೇ ನೆಲದೊಡೆಯ
ಎಂದವನು
ಜಿಡ್ಡುಗಟ್ಟಿದ ಜಾತಿಭಾತಿಗೇ ಒದ್ದವನು.
.......
ಆಲ ಮಾತಾಡಿದ್ದು ಹೀಗಲ್ಲವೇನಣ್ಣ–
ಅಂತಃಕರಣವೇ ತುಂಬಿ ತುಳುಕಿ?

ನಿನ್ನಂತೆ ಅತ್ತವನ, ನಿನ್ನಂತೆ ಸತ್ತವನ
ಸತ್ತ ಮೇಲೆಯೇ ಹೆಚ್ಚುಹೆಚ್ಚಾಗಿ ಸಂದವನ
ಮತ್ತೊಬ್ಬನನು ಕಾಣೆ–ಬಡವರದೆ
ಗುಡಿಯಾಣೆ.

ಲೋಹಿಯಾ ತೀರಿಕೊಂಡ ಮೇಲೆ ಖಿನ್ನರಾಗಿದ್ದ ಸ್ನೇಹಲತಾ–ಪಟ್ಟಾಭಿರಾಮರೆಡ್ಡಿ ಮದ್ರಾಸಿನಲ್ಲಿದ್ದ ತಮ್ಮ ಸಣ್ಣಪುಟ್ಟ ಆಸ್ತಿ ಮಾರಿ 1968ರಲ್ಲಿ ಬೆಂಗಳೂರಿಗೆ ಬಂದರು; ಪಟ್ಟಾಭಿಯವರ ತಂದೆಯ ಮನೆಯಲ್ಲಿ ನೆಲೆಸಿದರು. ಆ ಕಾಲವನ್ನು ನಂದನಾ ರೆಡ್ಡಿ ದಾಖಲಿಸಿದ್ದಾರೆ:

'ಡಾಕ್ಟರ್ ತೀರಿಕೊಂಡ ನಂತರ ಅಪ್ಪ–ಅಮ್ಮ ಡಾಕ್ಟರ್ ತತ್ವಗಳಿಗನುಗುಣವಾಗಿ ಬದುಕುವ ಹಾದಿಯಲ್ಲಿ ಸೆಣಸುತ್ತಾ ನಡೆದರು. ತಾವು ಬದುಕುವ ರೀತಿಯಲ್ಲೇ ಡಾಕ್ಟರ್‌ಗೆ ಗೌರವ ಸಲ್ಲಿಸುತ್ತಿದ್ದರು. ಆ ಗೌರವದ ಒಂದು ಶಾಶ್ವತ ಕೊಡುಗೆಯೆಂದರೆ, ಜಾತಿಪದ್ಧತಿ ಕುರಿತ ಲೋಹಿಯಾರ ನಿಲುವುಗಳಿಂದ ಪ್ರೇರಣೆ ಪಡೆದಿದ್ದ 'ಸಂಸ್ಕಾರ' ಕಾದಂಬರಿಯನ್ನು ಸಿನಿಮಾ ಮಾಡಿದ್ದು.

'ಅನಂತಮೂರ್ತಿಯವರ 'ಸಂಸ್ಕಾರ'ದ ಕತೆಯನ್ನು 1968ರಲ್ಲಿ ಗೋಪಾಲಗೌಡರು ನಮ್ಮ